# ಸ್ವಾತಂತ್ರ್ಯದ ಚೈತನ್ಯ

(ಲೇಖಕರು ತಮ್ಮ ದೇಶವಾಸಿಗಳಿಗೆ ನ್ಯೂಯಾರ್ಕ್ ನಿಂದ ಬರೆದ ಪತ್ರ)

ರವೀಂದ್ರನಾಥ್ ಠಾಗೋರ್

ಸ್ವಾತಂತ್ರ್ಯವು ನಮ್ಮ ಚಟುವಟಿಕೆಗಳಿಗೆ ಶಕ್ತಿಯನ್ನೂ ನಮ್ಮ ಕಲ್ಪನೆಗೆ ವೈಶಾಲ್ಯವನ್ನೂ ತಂದುಕೊಡುವ ಆಂತರಿಕ ವಿಚಾರವಾಗದೆ, ಕೇವಲ ಬಾಹ್ಯ ಸನ್ನಿವೇಶಗಳ ಒಂದು ವಿಷಯವಾಗಿದ್ದರೆ ಅದು ಕಣ್ಣಿಗೆ ಬಟ್ಟೆ ಕಟ್ಟಿಕೊಂಡವನ ಮುಂದೆ ಇರುವ ಬಯಲಿನಂತೆ ಇರುತ್ತದೆ.

ಇತ್ತೀಚೆಗೆ ನಾನು ಪಾಶ್ಚಾತ್ಯ ದೇಶಗಳಲ್ಲಿ ಪ್ರಯಾಣಿಸುತ್ತಿರುವಾಗ ಅಲ್ಲಿನ  ಸ್ವಾತಂತ್ರ್ಯದ ಕಲ್ಪನೆಯು ದುರ್ಬಲವೂ ನಿಷ್ಫಲವೂ ಆಗಿರುವುದು ನನ್ನ ಅನುಭವಕ್ಕೆ ಬಂದಿತು. ಇದರ ಪರಿಣಾಮವಾಗಿ  ಅಲ್ಲಿಯ ಜನರ ಸಾಮಾಜಿಕ ಮತ್ತು ರಾಜಕೀಯ ಸಂಬಂಧಗಳಲ್ಲಿ ದಬ್ಬಾಳಿಕೆ ಮತ್ತು ಬಲಪ್ರಯೋಗದ ಪ್ರವೃತ್ತಿ ವೇಗವಾಗಿ ಹರಡುತ್ತಿದೆ.

ಹಿಂದಿನ ಕಾಲದ ರಾಜರ ಆಳ್ವಿಕೆಯ ಸಮಯದಲ್ಲಿ, ರಾಜನು ಪಿತೂರಿಗಳ ಅಪಾಯಕರ ಸನ್ನಿವೇಶದಲ್ಲಿ ಜೀವಿಸಬೇಕಿತ್ತು. ಆಸ್ಥಾನದಲ್ಲಿ ಸದಾಕಾಲವೂ  ಕೊನೆಮೊದಲಿಲ್ಲದ ಸುಳ್ಳು ವದಂತಿ, ಮಿಥ್ಯಾಪವಾದ, ಪಿತೂರಿ ಹಾಗೂ ಒಳಸಂಚುಗಳನ್ನು ರೂಪಿಸಿ ಆಸ್ಥಾನಿಕರು ಸ್ವ-ಹಿತಾಸಕ್ತಿಗಳ ಸಲುವಾಗಿ ರಾಜನನ್ನು ತಮ್ಮ ದಾಳವಾಗಿ ಬಳಸಿಕೊಳ್ಳುತ್ತಿದ್ದರು.

ಪ್ರಸಕ್ತ ಸಮಯದಲ್ಲಿ ಈ ರೀತಿಯ ಪಿತೂರಿ ಇನ್ನೂ ಹೆಚ್ಚು ವ್ಯಾಪಕವಾದ  ಪಾತ್ರವಹಿಸಿ ಇಡೀ ದೇಶದ ಮೇಲೆ ತನ್ನ ಪ್ರಭಾವವನ್ನು ಬೀರುತ್ತಿದೆ.  ಜನರಿಗೆ ಸುಳ್ಳು ಭರವಸೆಗಳನ್ನು ನೀಡಿ ಅಮಲೇರಿಸುತ್ತಾರೆ.  ಸುಳ್ಳು ಆತಂಕಗಳನ್ನು ಸೃಷ್ಟಿಸಿ ಅವರು ಭಯಂಕರ ಕಾರ್ಯಗಳಲ್ಲಿ ತೊಡಗುವ ಹಾಗೆ ಮಾಡುತ್ತಾರೆ;  ನಯಗಾರಿಕೆಯ ಮಾತಿನಿಂದ ಮತ್ತು ಬೂಟಾಟಿಕೆಯ ನಟನೆಯ ಮೂಲಕ ಜನರ ಉದಾತ್ತ ಭಾವನೆಗಳನ್ನು ಶೋಷಿಸಿ, ಅವರನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಾರೆ, ಬಣ್ಣದ ಮಾತುಗಳಿಂದ  ಅವರ ಧನವನ್ನು ಕಸಿಯುತ್ತಾರೆ, ನಿರ್ಲಜ್ಜ ವ್ಯವಹಾರಚಾತುರ್ಯ ಮತ್ತು ಹಣದ ದುರ್ಬಳಕೆಯಿಂದ ಜನರ ಮನಸ್ಥಿತಿಯನ್ನು ಕೆಡಿಸುತ್ತಾರೆ.

ಹಿಂದಿನ ಕಾಲದಲ್ಲಿ, ರಾಜನಿಗೆ ಪ್ರಪಂಚದಲ್ಲಿ ಅನಿರ್ಬಂಧಿತ ಸ್ವಾತಂತ್ರ್ಯವಿರುವ ವ್ಯಕ್ತಿ ಎಂಬುದನ್ನು ಬೋಧಿಸಲಾಗುತ್ತಿತ್ತು. ಅವನಿಗೆ ತೋರಿಕೆಯ ಬಾಹ್ಯ-ಸ್ವಾತಂತ್ರ್ಯ ಇತರ ವ್ಯಕ್ತಿಗಳಿಗಿಂತ ಹೆಚ್ಚಾಗಿ ಇತ್ತು ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಅವನ ಸುತ್ತ ಸುಂದರವಾದ ಅವಾಸ್ತವಿಕತೆಯ  ಕೋಟೆಯೇ ನಿರ್ಮಾಣವಾಗಿ ರಾಜನನ್ನು ಅದರಲ್ಲಿ ಬಂಧಿಸಿಡಲಾಗುತ್ತಿತ್ತು.

ಈಗ ಪಾಶ್ಚಾತ್ಯರಲ್ಲಿ ಆಗುತ್ತಿರುವುದೂ ಇದೇ. ಅವರು ಅತ್ಯಂತ ಸ್ವತಂತ್ರರು ಎಂದು ಅವರನ್ನು ನಂಬಿಸಲಾಗುತ್ತಿದೆ. ಅವರ ಕೈಯಲ್ಲಿ ಸಾರ್ವಭೌಮ ಶಕ್ತಿ ಇದೆ ಎನ್ನುವ ವಿಶ್ವಾಸವನ್ನು ಅವರಲ್ಲಿ ಮೂಡಿಸಲಾಗುತ್ತಿದೆ. ಆದರೆ, ತನಗೆ ಸ್ವಾತಂತ್ರ್ಯವಿದೆಯೆಂದು ಭಾವಿಸಿಕೊಂಡ ಕುದುರೆಯು ಬಯಲಿನಲ್ಲಿ ಸ್ವಚ್ಛಂದವಾಗಿ ಓಡಾಡುತ್ತದೆ ಎನ್ನುವ ಕಾರಣಕ್ಕಾಗಿಯೇ ಅದನ್ನು ಹಿಡಿದು ಲಾಯದಲ್ಲಿ ಕಟ್ಟಿಹಾಕುವಂತೆ ಕೇವಲ ಸ್ವ-ಹಿತಾಸಕ್ತಿಯನ್ನೇ ಗುರಿಯನ್ನಾಗಿಸಿಕೊಂಡ ಕೆಲವೇ ಕೆಲವರು ಇತರರ ಶಕ್ತಿಯನ್ನು ಕಸಿದುಕೊಳ್ಳುತ್ತಿದ್ದಾರೆ. ಸ್ವತಂತ್ರವಾಗಿ ಯೋಚಿಸಲಾಗದ ಸಾರ್ವಜನಿಕರು ತೋರಿಕೆಯ ಸ್ವಾತಂತ್ರ್ಯವನ್ನು ಅನುಭವಿಸುವಂತೆ ಮಾಡುತ್ತಾರೆ, ಆದರೆ ನಿಜವಾದ ಸ್ವಾತಂತ್ರ್ಯವನ್ನು ಎಲ್ಲ ಕಡೆಗಳಿಂದಲೂ ಮತ್ತು ಎಲ್ಲ ರೀತಿಗಳಿಂದಲೂ ಸಂಕುಚಿತಗೊಳಿಸುತ್ತಾರೆ. ಜನರ ಚಿಂತನಾ ಲಹರಿಯನ್ನು ಸಂಘಟಿತ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ರೂಪಿಸಿ, ನಿರಂತರವಾಗಿ ಅಸತ್ಯಗಳನ್ನು ಸತ್ಯವೆಂದು ತೋರುವ ಹಾಗೆ ಮಾಡಿ ಉಪಾಯದಿಂದ ಅಥವಾ ಕೆಲವೊಮ್ಮೆ ದಂಡನೆಗಳನ್ನು ಹೇರುವ ಮೂಲಕ ಸಾರ್ವಜನಿಕರು ವಿವೇಚನೆ ಮತ್ತು ವಿವೇಕದಿಂದ ತಮ್ಮ ಅಭಿಪ್ರಾಯ ರೂಪಿಸಿಕೊಳ್ಳುವುದನ್ನು ತಡೆಯಲಾಗುತ್ತಿದೆ; ಸಮ್ಮೋಹಕ ಪದಪುಂಜಗಳ ಪ್ರಪಂಚವನ್ನು ಸೃಷ್ಟಿಸಿ, ಆ ಅಸಹಜ ಪ್ರಪಂಚದಲ್ಲಿ ಜನರು ಜೀವಿಸುವಂತೆ ಮಾಡಲಾಗುತ್ತಿದೆ. ವಾಸ್ತವದಲ್ಲಿ ಜನರು ಶಕ್ತಿಯ ಭಂಡಾರವಾಗಿದ್ದಾರೆ. ಆದರೆ, ಸ್ವ-ಹಿತಾಸಕ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡಿರುವ ಸಾಹಸಿಗಳು ತಮ್ಮ ಕಾರ್ಯಸಾಧನೆಗಾಗಿ ಈ ಭಂಡಾರಗಳಿಗೆ ಮುತ್ತಿಗೆ ಹಾಕುತ್ತಿರುತ್ತಾರೆ.

ಈ ಎಲ್ಲ ಕಾರಣಗಳಿಂದ ಪಾಶ್ಚಾತ್ಯ ವಾತಾವರಣದಲ್ಲಿ ಸ್ವಾತಂತ್ರ್ಯದ ಆದರ್ಶ ಕಲ್ಪನೆಯೇ ದುರ್ಬಲವಾಗಿದೆ ಎಂಬುದು ನನಗೆ ನಿಚ್ಚಳವಾಗಿ ತೋರುತ್ತಿದೆ. ಈ ಸಮಾಜದಲ್ಲಿ ಗಾಣಕ್ಕೆ ಕಟ್ಟಿರುವ ಎತ್ತುಗಳಂತೆ, ಆರ್ಥಿಕ ಮತ್ತು ರಾಜಕೀಯ ರಂಗದ ಕೆಲವೇ ವ್ಯಕ್ತಿಗಳ ಇಚ್ಛಾನುಸಾರ ದುಡಿಯುವ ಸಹಸ್ರಾರು ಜನರನ್ನು ಗುಲಾಮರನ್ನಾಗಿ ಇಟ್ಟುಕೊಳ್ಳುವಂತಹ ಮನೋಧರ್ಮ, ಅಂದರೆ, ಪರಸ್ಪರರಲ್ಲಿ ಅಪನಂಬಿಕೆ ಮತ್ತು ಭೀತಿ ಇರುವ ಮನೋಧರ್ಮ - ಇಲ್ಲಿಯ ಜನರದ್ದು. ಅಮಾನವೀಯ ಮತ್ತು ಅನ್ಯಾಯದ ಪ್ರಸಂಗಗಳು ಸರ್ವೇಸಾಮಾನ್ಯವಾಗಿದ್ದು, ಜನರು ಭಯಭೀತ ಮನಸ್ಥಿತಿಯಲ್ಲಿ ವ್ಯವಹರಿಸುತ್ತಿದ್ದಾರೆ. ಹೇಡಿತನದಿಂದ ಉದ್ಭವಿಸುವ ಕ್ರೌರ್ಯವು ಉಳಿದೆಲ್ಲ ರೀತಿಯ ಕ್ರೌರ್ಯಗಳಿಗಿಂತ ಹೆಚ್ಚು ವಿಕೃತವಾಗಿರುತ್ತದೆ. ಹಣ ಮತ್ತು ಅಧಿಕಾರದ ಅಮಲಿಗೆ ತಮ್ಮ ಆತ್ಮವನ್ನು ಮಾರಿಕೊಂಡವರ ಮನಸ್ಸಿನ ತುಂಬಾ ಅನುಮಾನ ಮತ್ತು ಆತಂಕಗಳು ತುಂಬಿರುತ್ತವೆ. ಆದುದರಿಂದ ತಮಗೆ ಕೆಟ್ಟದ್ದಾಗಬಹುದು ಎಂದು ಸ್ವಲ್ಪ ಹೆದರಿಕೆಯಾದರೂ ಅವರು ನಿರ್ದಯರಾಗುತ್ತಾರೆ. ಇಂತಹವರು ಇತರರಿಗೆ ಸ್ವಾತಂತ್ರ್ಯವನ್ನು ನೀಡುವುದಕ್ಕೆ ನೈತಿಕವಾಗಿ ಅಸಮರ್ಥರಾಗಿರುತ್ತಾರೆ. ಅಧಿಕಾರದಲ್ಲಿ ಇರುವವರಿಂದ ಪ್ರಯೋಜನ ಪಡೆಯುವ ಆತುರದಲ್ಲಿ ಇವರು ರಾಜಕೀಯ ದಾಳದಾಟದಲ್ಲಿ ನಡೆಯುವ ಅನ್ಯಾಯಗಳನ್ನು ಕಂಡೂ ಕಾಣದಂತಿರುವುದಷ್ಟೇ ಅಲ್ಲದೆ ತಾವೂ ಅದರಲ್ಲಿ ಭಾಗವಹಿಸುತ್ತಾರೆ. ತಮ್ಮ ಲಾಭಕ್ಕೆ ಧಕ್ಕೆಯೊದಗಬಹುದೆಂಬ ಆತಂಕ ಇವರಲ್ಲಿ ಸದಾಕಾಲವೂ ಮನೆಮಾಡಿಕೊಂಡಿದ್ದು, ದೀರ್ಘಾವಧಿಯ ಅನಂತರ ತಮ್ಮ ಹಾಗೂ ಇತರರ ಸ್ವಾತಂತ್ರ್ಯವನ್ನು ಬಿಟ್ಟುಕೊಡುವುದಕ್ಕೆ ಸಿದ್ಧರಾಗುವವರೆಗೆ ಈ ಆತಂಕವು ಸ್ವಾತಂತ್ರ್ಯ ಮತ್ತು ನ್ಯಾಯಪರವಾದ ಪ್ರೀತಿಯ ತಲೆಯಮೇಲೆ ಹೊಡೆದು ಯಾವಾಗಲೂ ಅವು ಮೇಲೇಳದಂತೆ ಮಾಡುತ್ತಿರುತ್ತದೆ.

ಪಾಶ್ಚಾತ್ಯ ದೇಶಗಳಲ್ಲಿ ಕಣ್ಣಿಗೆ ಮಣ್ಣೆರಚುವಂತೆ ಎಲ್ಲೆಲ್ಲೂ ಕಾರ್ಯಪ್ರವೃತ್ತವಾಗಿದ್ದು, ಅವಿಶ್ವಾಸ, ಭಯ. ಜುಗುಪ್ಸೆಗಳನ್ನು ಸೃಷ್ಟಿಸುತ್ತಿರುವ ಹಣದ ಮತ್ತು ವ್ಯವಸ್ಥಿತವಾದ ಪ್ರಚಾರದ ಅಪಾರ ಶಕ್ತಿಗಳು ಅನುಭವಕ್ಕೆ ಬಂದ ಮೇಲೆ, ನಿಜವಾದ

ಸ್ವಾತಂತ್ರ್ಯದ ಹಿಂದಿರುವ ಸತ್ಯವು ನಮ್ಮ ಮನಸ್ಸು ಹಾಗೂ ಚೈತನ್ಯಗಳಲ್ಲಿರುತ್ತದೆ ಎಂಬುದು ನನಗೆ ಅರಿವಾಗಿದೆ. ನಮಗಿದು ಹೊರಗಿನಿಂದ  ಬರಲು ಖಂಡಿತವಾಗಿ ಸಾಧ್ಯವಿಲ್ಲ. ಸ್ವಾತಂತ್ರ್ಯವನ್ನು ತನಗಾಗಿ ಪ್ರೀತಿಸಿ ಹಾಗೂ ಇತರರಿಗೂ ಆ ಸ್ವಾತಂತ್ರ್ಯವನ್ನು ಸಂತೋಷದಿಂದಲೇ ನೀಡುವ ವ್ಯಕ್ತಿ ಮಾತ್ರ ಸ್ವತಂತ್ರನಾಗಿರಲು ಸಾಧ್ಯ. ಗುಲಾಮರನ್ನು ಇಟ್ಟುಕೊಳ್ಳಲು ಬಯಸುವ ಮನುಷ್ಯ ಅವರ ಜೊತೆಗೆ ತನ್ನನ್ನೂ ಸಹ ಗುಲಾಮಗಿರಿಗೆ ಬಂಧಿಸಿಕೊಳ್ಳಬೇಕಾಗುತ್ತದೆ; ಬೇರೆಯವರನ್ನು ಹೊರಗಿಡಲು ಕಟ್ಟಿಸಿದ ಗೋಡೆಗಳು ಸ್ವತಃ ಅವನ ಸ್ವಾತಂತ್ರ್ಯದ ಸುತ್ತಲೂ ಕಟ್ಟಿದ ಗೋಡೆಗಳಾಗಿ ನಿಲ್ಲುತ್ತವೆ; ಬೇರೆಯವರಿಗೆ ಇರುವ ಸ್ವಾತಂತ್ರ್ಯವನ್ನು ಕುರಿತು ನಂಬಿಕೆ ಇಲ್ಲದಿರುವವನು ತನ್ನ ಸ್ವಾತಂತ್ರ್ಯದ ನೈತಿಕ ಹಕ್ಕನ್ನು ಕಳೆದುಕೊಳ್ಳುತ್ತಾನೆ.  ಇಂದಲ್ಲ ನಾಳೆ,  ಅವನು ಇತರರ ಗುಲಾಮನಾಗಿ ಸೇವೆ ಸಲ್ಲಿಸುವ ಹೀನಾಯ ಪರಿಸ್ಥಿತಿಗೆ ಭೌತಿಕವಾಗಿ ಮತ್ತು ನೈತಿಕವಾಗಿ ಸಿಲುಕಿಕೊಳ್ಳುತ್ತಾನೆ.

ಈಗ, ಅಪೇಕ್ಷೆಪಡುತ್ತಿರುವ ಸ್ವಾತಂತ್ರ್ಯವು ಬಾಹ್ಯ ಪರಿಸ್ಥಿತಿಗಳಿಗೆ ಮಾತ್ರ ಸೀಮಿತವಾಗಿರುವುದೇ?  ಇದು ಒಬ್ಬರಿಂದರೊಬ್ಬರಿಗೆ ವರ್ಗಾವಣೆಯಾಗಬಲ್ಲ ಸರಕೇ? ಸ್ವಾತಂತ್ರ್ಯದ ಬಗ್ಗೆ ನಿಜವಾದ ಪ್ರೀತಿಯನ್ನು ಅವರು ಬೆಳೆಸಿಕೊಂಡಿದ್ದಾರಾ?  ಇದರಲ್ಲಿ ಅವರಿಗೆ ನಂಬಿಕೆ ಇದೆಯೆ?  ತಮ್ಮ ಮಕ್ಕಳು ಅನ್ಯಾಯ ಮತ್ತು ಅವಿಚಾರಪೂರಕವಾದ ಅಡೆತಡೆಗಳಿಂದ ವಿಚಲಿತರಾಗದೇ, ಆದರ್ಶಪ್ರಾಯವಾಗಿರುವ ಮಾನವೀಯ ಘನತೆಗಳನ್ನು ರೂಢಿಸಿಕೊಂಡು ಬೆಳೆಯಲು ತಮ್ಮ  ಸಮಾಜದಲ್ಲಿ ಅವಕಾಶವನ್ನು ನೀಡಲು ಸಿದ್ಧರಿದ್ದಾರೆಯೇ? ಈ ಪ್ರಶ್ನೆಗಳನ್ನು ತಮ್ಮಲ್ಲಿಯೇ ಕೇಳಿಕೊಳ್ಳಬೇಕೆಂದು ನನ್ನ ದೇಶವಾಸಿಗಳಲ್ಲಿ ನಾನು ಆಗ್ರಹಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇನೆ.
ಸಮಾಜವನ್ನು ಒಡೆಯುವ ಗೋಡೆಗಳನ್ನು ನಾವು ಶಾಶ್ವತಗೊಳಿಸಿದ್ದೇವಲ್ಲವೇ?. ಇಂತಹ ವರ್ಗೀಕರಣದ ಬಗೆಗೆ, ಇದರ ವಿಶೇಷತೆಯ ಬಗ್ಗೆ ನಮಗೆ ಆಳವಾದ ಹೆಮ್ಮೆ ಕೂಡ ಇದೆ.  ತನ್ನ ಸಮಾಜದ ಸದಸ್ಯರನ್ನು ವರ್ಗೀಕರಿಸುವ ಉದ್ದೇಶದಲ್ಲಿ ಪ್ರಪಂಚದ ಯಾವ ದೇಶವೂ ಸಫಲವಾಗದೇ ಇರುವಾಗ ನಾವು ಇದನ್ನು ಸಾಧಿಸಿದ್ದೇವೆ ಎಂದು ನಾವು ಕೊಚ್ಚಿಕೊಳ್ಳುತ್ತೇವೆ. ಇಷ್ಟಾದರೂ, ನಮ್ಮನ್ನು ಅವಮಾನಕ್ಕೀಡುಮಾಡುವ ಆಳುವವರು ಮತ್ತು ಆಳಲ್ಪಡುವವರ ನಡುವೆ ಇರುವ ಅಸಹಜವಾದ ಸಂಬಂಧವನ್ನು, ಮಿಲಿಟರಿ ಹಿಂಸೆಯ ಭಯದ ಮೂಲಕ, ಕೃತಕವಾಗಿ ಒಂದಾಗಿ ಕಾಣುವಂತೆ ಮಾಡಿದರೆ, ಅದು ಆಘಾತಕಾರಿಯಾಗಿರುತ್ತದೆ ಎಂಬುದನ್ನು ನಮ್ಮ ರಾಜಕೀಯ ಆಂದೋಲನಗಳ ಸಂದರ್ಭದಲ್ಲಿ ನಾವು ಸುಲಭವಾಗಿ ಮರೆತುಬಿಡುತ್ತೇವೆ.

ಭಾರತ ಮಾತೆಯ ಜೀವಶಕ್ತಿಯು ಉತ್ತುಂಗ ಸ್ಥಿತಿಯಲ್ಲಿದ್ದು, ಅಮರವಾದ ಸತ್ಯಕ್ಕೆ ದಿನವನ್ನು ನೀಡಿದಾಗ, ಆಕೆಯ ಮಕ್ಕಳು ಸತ್ಯದ ಅನ್ವೇಷಣೆಯನ್ನು ನಡೆಸುವ ಸತ್ವವನ್ನು ಹೊಂದಿದ್ದರು.  ನಮ್ಮ ಜನರ ಹೃದಯಕ್ಕೆ ಹತ್ತಿರವಾಗಿದ್ದ ಮಹಾಭಾರತ ಕಾವ್ಯವು ಉಕ್ಕುತ್ತಿದ್ದ ಜೀವನೋತ್ಸಾಹ, ಅನ್ವೇಷಣೆಯ ಪ್ರವೃತ್ತಿ ಮತ್ತು ಪ್ರಯೋಗಶೀಲತೆಗೆ ಇದ್ದ ಸ್ವಾತಂತ್ರ್ಯಗಳು ಅಂದಿನ ಜನರ ಜೀವನದಲ್ಲಿ ತುಂಬಿ ಹರಿಯುತ್ತಿದ್ದ ಅದ್ಭುತವಾದ ಚಿತ್ರಣವನ್ನು ನಮಗೆ ಕೊಡುತ್ತದೆ. ಬುದ್ಧನ ಕಾಲದಲ್ಲಿಯಂತೂ ಜನತೆಯ ಅಂತರಾಳದಲ್ಲಿದ್ದ ಮಾನವೀಯತೆಯ ಸತ್ವವು ತೀವ್ರವಾಗಿ ಪ್ರಚೋದಿತವಾಗಿತ್ತು.  ಇದರಿಂದ ಅರಳಿದ ಮನಸ್ಸಿನ ಸ್ವಾತಂತ್ರ್ಯವು  ತನ್ನ ಚಿಂತನೆಯ ವೈಭವವನ್ನು ಏಷ್ಯಾ ಖಂಡದಲ್ಲೆಲ್ಲಾ ಅಭಿವ್ಯಕ್ತಗೊಳಿಸಿತು.  ಆದರೆ ಭಾರತೀಯ ಜೀವನದ ಇಳಿಗಾಲದೊಂದಿಗೆ ಈ ಸೃಷ್ಟಿಶೀಲ ಚೈತನ್ಯವೂ ಅಂತ್ಯಗೊಂಡಿತು.  ನಂತರ ಬಂದದ್ದು ಜಡತೆಯ ಕಾಲ.  ವೈವಿಧ್ಯ ಮತ್ತು ನಮ್ಯತೆಗಳ ಸಮಾಜದಲ್ಲಿ ಸಹಜವಾಗಿದ್ದ

ಪರಸ್ಪರ ಒಡನಾಟದ ವ್ಯವಸ್ಥೆಯು ಹಿಂದೆ ಸರಿದು, ಪ್ರತ್ಯೇಕತೆಯ ಕಠೋರ ನಿಮಗಳನ್ನು ಸ್ಥಾಪಿಸುವ ಸಾಂಪ್ರದಾಯಿಕ ವ್ಯವಸ್ಥೆಗೆ ದಾರಿಮಾಡಿಕೊಟ್ಟಿತು.

ಜೀವನದಲ್ಲಿ ಅಸಮತೆ ಇರುತ್ತದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಅವು ಪ್ರಕೃತಿಸಹಜವಾಗಿರುತ್ತವೆ ಮತ್ತು ನಮ್ಮ ಅತ್ಯಾವಶ್ಯಕ ಮೂಲ ಕ್ರಿಯೆಗಳೊಡನೆ ಸಾಮರಸ್ಯ ಹೊಂದಿರುತ್ತವೆ. ದೇಹದಲ್ಲಿ ತಲೆಯ ಸ್ಥಾನವು ಮೇಲೆ ಇದ್ದು, ಕಾಲಿನಿಂದ ದೂರ ಇರುತ್ತದೆ. ಹೀಗಿರುವುದು ಯಾವುದೇ ಬಾಹ್ಯ ಕಾರಣ ಅಥವಾ ದಬ್ಬಾಳಿಕೆಯ ಹುನ್ನಾರದಿಂದಲ್ಲ. ಅಕಸ್ಮಾತ್ ಹೆಚ್ಚಿನ ಸಮಯ ಪಲ್ಟಿ ಹೊಡೆಯುವ ಅನಿವಾರ್ಯತೆ ನಮಗಿದ್ದರೆ ತಲೆ ಮತ್ತು ಕಾಲುಗಳು ತಮ್ಮ ಕಾರ್ಯಗಳನ್ನು ವಿನಿಮಯ ಮಾಡಿಕೊಳ್ಳುವುದಿಲ್ಲ. ಆದರೆ, ನಮ್ಮ ಸಾಮಾಜಿಕ ವರ್ಗ-ವ್ಯವಸ್ಥೆಗೆ ಈ ಸಹಜ ನಿಯಮದ ಅನಿವಾರ್ಯತೆ ಇರುವುದೇ? ಇದಕ್ಕೆ "ಹೌದು" ಎಂದು ಹೇಳುವ ಧೈರ್ಯ ನಮಗಿದ್ದರೆ, ಅನ್ಯದೇಶೀಯರು ಶಾಶ್ವತವೆಂದು ತಿಳಿದುಕೊಂಡಿರುವ ನಮ್ಮನ್ನಾಳುವ ಅವರ ನೀತಿಗಾಗಿ, ಅವರನ್ನು ಹೇಗೆ ದೂಷಿಸುವುದು?

ಮಾನವರಿಗೆ ಬದಲಾವಣೆಯ ಅವಕಾಶವನ್ನೇ ನೀಡದೆ, ಅವರನ್ನು ವ್ಯವಸ್ಥೆಯಲ್ಲಿ ಬಿಗಿಯಾಗಿ ಹಿಡಿದು ನಾವು ಜೀವನ ಮತ್ತು ಬೆಳವಣಿಗೆಯ ಸಹಜ ನಿಯಮಗಳನ್ನು ನಿರ್ಲಕ್ಷಿಸಿದ್ದೇವೆ. ಜೀವಂತ ಮನುಷ್ಯರನ್ನು ನಿರಂತರ ಜಡತೆಗೆ ತಳ್ಳುವ ಮೂಲಕ, ತಮ್ಮ ಮನೋಭಿಲಾಷೆಯ ವಿನ್ಯಾಸಕ್ಕೆ ಸರಿಹೊಂದುವಂತೆ ಸಂದರ್ಭಗಳನ್ನು ಬದಲಾಯಿಸಿಕೊಂಡು ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳುವುದು ಅವರಿಗೆ ಸಾಧ್ಯವಾಗದಂತೆ ಅವರನ್ನು ಅಸಮರ್ಥರನ್ನಾಗಿಸಿದ್ದೇವೆ. ನಮ್ಮ ಅವನತಿಯ ಕರಾಳ ದಿನಗಳಲ್ಲಿದ್ದ ಆದರ್ಶವನ್ನು ನಮ್ಮದಾಗಿಸಿಕೊಂಡು, ಗತಕಾಲದ ಭಾರದ ಅಡಿಯಲ್ಲಿ ಆತ್ಮಸಂವೇದನೆಯನ್ನು ಹೂತುಹಾಕಿಬಿಟ್ಟಿದ್ದೇವೆ. ನಮ್ಮ ಜನರ ಚೈತನ್ಯದ ಎಲ್ಲಾ ಗರಿಗಳನ್ನು ಕತ್ತರಿಸಿ, ಪಂಜರದ ಸಾಂಪ್ರದಾಯಿಕ ಪೂಜೆಯನ್ನು ವಿಸ್ತೃತವಾಗಿ ಮಾಡುವ ವ್ಯವಸ್ಥೆಯನ್ನು ರೂಢಿಸಿಕೊಂಡಿದ್ದೇವೆ. ಹಲವು ಶತಮಾನಗಳ ಅವನತಿ ಮತ್ತು ಅವಮಾನ, ಅಸ್ಪಷ್ಟ ಕಲ್ಪನೆಯ ರಾಷ್ಟ್ರೀಯ ಐಕ್ಯತೆ, ಹೊರಗಿನಿಂದ ಆದ ದಾಳಿಗಳ ವಿಪತ್ತಿನೆದುರು ನಮ್ಮ ಅಸಹಾಯಕತೆ, ಒಳಗಿನಿಂದ ಉದ್ಭವವಾಗುವ ವಿವೇಚನಾರಹಿತವಾದ ಆತ್ಮನಾಶ - ಇವುಗಳ ಕಾರಣದಿಂದ ಭೀಕರ ಶಿಕ್ಷೆಯನ್ನು ನಾವು ಅನುಭವಿಸುತ್ತಿದ್ದೇವೆ. ಆದರೆ ನಾವು ಎಷ್ಟರಮಟ್ಟಿಗೆ ಜಡರಾಗಿದ್ದೇವೆಂದರೆ, ನಮ್ಮ ಮೇಲೆ ಎಡೆಬಿಡದೆ ಕವಿದಿರುವ ಮತ್ತು ನಮ್ಮ ಹೆಜ್ಜೆಗಳನ್ನು ತಪ್ಪು ದಿಕ್ಕಿನತ್ತ ನಡೆಸುತ್ತಿರುವ ಈ ದೌರ್ಭಾಗ್ಯದ ಅರಿವೂ ನಮಗೆ ಇಲ್ಲವಾಗಿದೆ.

ಸ್ವಾತಂತ್ರ್ಯದಲ್ಲಿ ನಮಗೆ ನಿಜವಾದ ವಿಶ್ವಾಸವಿಲ್ಲದಿದ್ದರೆ, ಅದು ಸೃಷ್ಟಿಶೀಲವಾದದ್ದು ಎಂಬುದನ್ನು ತಿಳಿದುಕೊಳ್ಳದಿದ್ದರೆ, ಹಾಗೂ ಅದರೊಡನೆ ಬರುವ ಎಲ್ಲಾ ಅಪಾಯಗಳನ್ನೂ ಎದುರಿಸುವ ಎದೆಗಾರಿಕೆ ಇರಬೇಕೆನ್ನುವ ಅರಿವಿಲ್ಲದಿದ್ದರೆ ರಾಜಕೀಯ ಸ್ವಾತಂತ್ರ್ಯವು ನಮ್ಮ ಹಕ್ಕು ಎಂದು ಕೇಳುವ ಅಧಿಕಾರವನ್ನು ನಾವು ಕಳೆದುಕೊಳ್ಳುವುದಷ್ಟೇ ಅಲ್ಲದೆ, ನಮ್ಮ ಸ್ವಂತ ಬಲದಿಂದ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಹೋಗುವ ಶಕ್ತಿಯನ್ನೂ ಕಳೆದುಕೊಳ್ಳುತ್ತೇವೆ. ಇದು ಪಕ್ಕಾ ನಾಸ್ತಿಕನನ್ನು ದೇವರ ಪೂಜೆಗಾಗಿ ನೇಮಕಮಾಡಿದಂತೆ ಆಗುತ್ತದೆ. ತಮ್ಮ ಒಡಹುಟ್ಟಿದವರನ್ನು, ಅವರು ಯಾವಾಗಲೂ ಏನೂ ತಿಳಿಯದ ಮುಗ್ಧರಾಗಿಯೇ ಇರುತ್ತಾರೆ, ಅವರು ತಮ್ಮ ಚಿಕ್ಕ ಚಿಕ್ಕ ಅಗತ್ಯಗಳ ವಿಷಯದಲ್ಲಿಯ ಜವಾಬ್ದಾರಿಗಳನ್ನೂ ತಾವೇ ತೆಗೆದುಕೊಳ್ಳಲಾರರು ಎಂದು ಪರಿಗಣಿಸಿ, ಅವರು ಪ್ರತೀ ಹೆಜ್ಜೆಯಿಡಲು

ಪ್ರಯತ್ನಿಸಿದಾಗಲೂ ಅವರನ್ನು ಶಿಕ್ಷೆಯ ಭಯದಲ್ಲಿಯೇ ಇರಿಸುತ್ತಾ, ಎಲ್ಲಿಗೂ ಕೊಂಡೊಯ್ಯದ ಕುರುಡು ದಾರಿಯಲ್ಲಿ ಅವರನ್ನು ಒತ್ತಾಯ ಪೂರ್ವಕವಾಗಿ ನಡಸುತ್ತಾರೋ, ಅವರಲ್ಲಿ ಹಲವರನ್ನು ಬೂಟಾಟಿಕೆ ಮತ್ತು ನೈತಿಕ ಜಡತ್ವದೆಡೆಗೆ ತಳ್ಳುವಂತಹ ವ್ಯಕ್ತಿಗಳು ತಮ್ಮ ನಿಜವಾದ ಜವಾಬ್ದಾರಿಯ ನಿರ್ವಹಣೆಯಲ್ಲಿ ಮತ್ತೆ ಮತ್ತೆ ವಿಫಲರಾಗುತ್ತಾರೆ. ಅಂತಹವರು ರಾಜಕೀಯ ರಂಗದಲ್ಲಿ ನ್ಯಾಯಯುತ ಸ್ವಾತಂತ್ರ್ಯವನ್ನು ಹೊಂದಲು ಮತ್ತು ಸ್ವಾತಂತ್ರ್ಯದ ಸಲುವಾಗಿ ಹೋರಾಡಲು ಅಸಮರ್ಥರಾಗಿರುತ್ತಾರೆ.

ಪಾಶ್ಚಾತ್ಯ ನಾಗರಿಕತೆಯಲ್ಲಿ ಯಾಂತ್ರಿಕ ಚೈತನ್ಯವಿದೆ. ಇದು ಚಲಿಸುತ್ತಲೇ ಇರಬೇಕು; ಈ ಕುರುಡು ಚಲನೆಗೆ ಆವಶ್ಯವಾದ ಚಾಲಕ ಶಕ್ತಿಗೆ ಮಾನವ ಜೀವಗಳೇ ಇಂಧನ. ಇದು ಜಡತೆಯಲ್ಲಿರುವ ಚಾಲನ ಶಕ್ತಿಯನ್ನು ಪ್ರತಿನಿಧಿಸುತ್ತದೆ ಮತ್ತು ಇದು ಹೊರನೋಟಕ್ಕೆ ಸ್ವಾತಂತ್ರ್ಯವೆಂಬಂತೆ ತೋರುತ್ತದೆ. ಆದರೆ ವಾಸ್ತವದಲ್ಲಿ ಇದು ಹಾಗಿರುವುದಿಲ್ಲ. ಆದುದರಿಂದ, ಇದು ತನ್ನ ವ್ಯಾಪ್ತಿಯ ಒಳಗೆ ಮತ್ತು ಅದರ ಹೊರಗೆ ಗುಲಾಮಗಿರಿಗೆ ಜನ್ಮ ನೀಡುತ್ತದೆ. ಭಾರತದ ಇಂದಿನ ನಾಗರಿಕತೆಯು ಎರಕದ ಅಚ್ಚಿನಲ್ಲಿ ಹೊಯ್ದು ನಿರ್ಮಿಸಿದ ಒಂದು ನಿರ್ದಿಷ್ಟ ಆಕಾರವನ್ನು ಮಾತ್ರ ಪಡೆಯುವ ನಿರ್ಬಂಧಕ್ಕೆ ಸಿಲುಕಿದೆ. ಇದು ತನ್ನ ಕಟ್ಟುನಿಟ್ಟಿನ ನಿಯಮಗಳ ಹಿಡಿತದಿಂದ ವ್ಯಕ್ತಿಗಳಲ್ಲಿರುವ ಜೀವಂತಿಕೆಯನ್ನು ಹಿಂಡಿಹಾಕುತ್ತದೆ ಮತ್ತು ಇದು ವೈಯಕ್ತಿಕ ಸ್ವಾತಂತ್ರ್ಯವನ್ನು ಅದುಮಿ ಬಿಡುವುದರಿಂದ, ವ್ಯಕ್ತಿಗಳನ್ನು ಯಾವ ರೀತಿಯಲ್ಲಿ ಬೇಕಾದರೂ ಮತ್ತು ಎಷ್ಟರ ಮಟ್ಟಿಗೆ ಬೇಕಾದರೂ ಪರಾಧೀನವಾಗುವಂತೆ ಮಾಡುವ ಕಾರ್ಯವು ಸುಲಭಸಾಧ್ಯವಾಗುತ್ತದೆ. ಈ ಎರಡೂ ಪರಂಪರೆಗಳಲ್ಲಿ ಜೀವನವನ್ನು ಜೀವಂತಿಕೆಯಿಲ್ಲದಿರುವುದಕ್ಕೆ ಮುಡಿಪಾಗಿಡುವಂತೆ ಮಾಡಲಾಗುತ್ತದೆ. ಪೂಜಿಸಲು ದೇವರೇ ಇಲ್ಲದ ಕಡೆ ನೀಡುತ್ತಿರುವ ಬಲಿಯಂತೆ ಇದು ವ್ಯರ್ಥ. ಪಶ್ಚಿಮದ ದೇಶಗಳು ಆಧ್ಯಾತ್ಮಿಕ ನಿಯಂತ್ರಣಕ್ಕಿಂತ ಹೆಚ್ಚಾಗಿ ಯಾಂತ್ರಿಕ ಶಕ್ತಿಯ ಉತ್ಪಾದನೆಯಲ್ಲಿ ನಿರಂತರವಾಗಿ ತೊಡಗಿಕೊಂಡಿವೆ. ಭಾರತವು ಜೀವಂತಿಕೆಯನ್ನು ಮೀರಿದ ಯಾಂತ್ರಿಕ ನಿಯಂತ್ರಣ ವ್ಯವಸ್ಥೆಯನ್ನು ರೂಪಿಸಿದೆ.

***